# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1054 |
| ಸದಸ್ಯರ ಹೆಸರು | : | ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 22-12-2021. |
| ಉತ್ತರಿಸುವ ಸಚಿವರು | : | ಮಾನ್ಯ ಲೋಕೋಪಯೋಗಿ ಸಚಿವರು |

| ಪ್ರ.. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಬೆಂಗಳೂರು--ಮೈಸೂರು ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯು ಆರಂಭಗೊಂಡಿದ್ದು ಯಾವಾಗ; | ರಾಷ್ಟ್ರೀಯ ಹೆದ್ದಾರಿ-275 ಬೆಂಗಳೂರಿನಿಂದ ಮೈಸೂರು ವರೆಗಿನ ರಸ್ತೆ ಕಾಮಗಾರಿಯು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ವ್ಯಾಪ್ತಿಗೆ ಒಳಪಟ್ಟಿರುತ್ತದೆ ಹಾಗೂ ಈ ಕೆಳಕಂಡಂತೆ ವರದಿಸಿರುತ್ತಾರೆ.<br><br>ಈ ಕಾಮಗಾರಿಯನ್ನು 2 ಪ್ಯಾಕೇಜ್ ಗಳನ್ನಾಗಿ ವಿಂಗಡಿಸಿ Hybrid Annuity Mode (HAM) ಅಡಿಯಲ್ಲಿ ಕೈಗೊಳ್ಳಲಾಗುತ್ತಿದೆ<br><br>**ಪ್ಯಾಕೇಜ್-1:** ರಾಷ್ಟ್ರೀಯ ಹೆದ್ದಾರಿ -275ರ ಬೆಂಗಳೂರಿನಿಂದ ನಿಡಘಟ್ಟ ವರೆಗೆ 6 ಪಥದ ರಸ್ತೆ ಹಾಗೂ 2 ಬದಿಯಲ್ಲಿ 2 ಪಥದ ಸರ್ವೀಸ್ ರಸ್ತೆ ಒಳಗೊಂಡಂತೆ ಒಟ್ಟು 56.200 ಕಿ.ಮೀ. ಉದ್ದದ ರಸ್ತೆಯ ಕಾಮಗಾರಿಯನ್ನು ದಿನಾಂಕ: 14.05.2019 ರಂದು ಪ್ರಾರಂಭಿಸಲಾಗಿರುತ್ತದೆ.<br><br>**ಪ್ಯಾಕೇಜ್-2:** ರಾಷ್ಟ್ರೀಯ ಹೆದ್ದಾರಿ-275ರ ನಿಡಘಟ್ಟದಿಂದ ಮೈಸೂರುವರೆಗೆ 6 ಪಥದ ರಸ್ತೆ ಹಾಗೂ 2 ಬದಿಯಲ್ಲಿ 2 ಪಥದ ಸರ್ವೀಸ್ ರಸ್ತೆ ಒಳಗೊಂಡಂತೆ ಕಿ.ಮೀ.74.20 ರಿಂದ ಕಿ.ಮೀ.134.304 ಒಟ್ಟು 61.104.ಕಿ.ಮೀ ಉದ್ದದ ರಸ್ತೆಯ ಕಾಮಗಾರಿಯನ್ನು ದಿನಾಂಕ:10.12.2019 ರಂದು ಪ್ರಾರಂಭಿಸಲಾಗಿದೆ. |
| ಆ. | ಸದರಿ ಕಾಮಗಾರಿಯು ಅಂದಾಜು ಮೊತ್ತ ಎಷ್ಟು; ಟೆಂಡರ್ ಪಡೆದ ಸಂಸ್ಥೆ ಯಾವುದು; (ವಿವರ ನೀಡುವುದು) | **ಪ್ಯಾಕೇಜ್-1:** ರಾಷ್ಟ್ರೀಯ ಹೆದ್ದಾರಿ-275ರ ಬೇಗಳೂರಿನಿಂದ ನಿಡಘಟ್ಟವರೆಗೆ 6 ಪಥದ ರಸ್ತೆ ಹಾಗೂ 2 ಬದಿಯಲ್ಲಿ 2 ಪಥದ ಸರ್ವೀಸ್ ರಸ್ತೆ ಒಳಗೊಂಡಂತೆ ಒಟ್ಟು ಕಿ.ಮೀ.56.200 ಉದ್ದದ ರಸ್ತೆಯ ಕಾಮಗಾರಿ ಯೋಜನೆಯ ಒಟ್ಟು ವೆಚ್ಚ ರೂ.3501.00 ಕೋಟಿಗಳ ಮೊತ್ತವಾಗಿರುತ್ತದೆ. ಸದರಿ ಕಾಮಗಾರಿಯನ್ನು ಮೆ:ದಿಲೀಪ್ ಬಿಲ್ಡ್‌ಕಾನ್ ಲಿಮಿಟೆಡ್ ಇವರಿಗೆ ವಹಿಸಲಾಗಿರುತ್ತದೆ. ದಿನಾಂಕ:14.05.2019 ರಂದು ಕಾಮಗಾರಿಯನ್ನು ಪ್ರಾರಂಭಿಸಿ 30 ತಿಂಗಳುಗಳಲ್ಲಿ ಪೂರ್ಣಗೊಳಿಸಬೇಕಾಗಿರುತ್ತದೆ. ಪ್ರಸ್ತುತ ಶೇ.85.31 ಭೌತಿಕವಾಗಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ ಹಾಗೂ ದಿನಾಂಕ:02.05.2022 ವರೆಗೆ ವಿಸ್ತರಣೆಗೆ ಅನುಮೋದನೆ ದೊರೆತಿರುತ್ತದೆ.<br><br>**ಪ್ಯಾಕೇಜ್-2:** ರಾಷ್ಟ್ರೀಯ ಹೆದ್ದಾರಿ -275ರ ನಿಡಘಟ್ಟ ದಿಂದ ಮೈಸೂರು ವರೆಗೆ 6 ಪಥದ ರಸ್ತೆ ಹಾಗೂ 2 ಬದಿಯಲ್ಲಿ 2 ಪಥದ ಸರ್ವೀಸ್ ರಸ್ತೆ ಒಳಗೊಂಡಂತೆ ಕಿ.ಮೀ.74.20 ರಿಂದ ಕಿ.ಮೀ.134.304 ಒಟ್ಟು 61.104 ಕಿ.ಮೀ. ಉದ್ದದ ರಸ್ತೆಯ ಕಾಮಗಾರಿ ಯೋಜನೆಯ ಒಟ್ಟು ವೆಚ್ಚ ರೂ.3816.72 ಕೋಟಿಗಳ ಮೊತ್ತವಾಗಿರುತ್ತದೆ. ಸದರಿ ಕಾಮಗಾರಿಯನ್ನು ಮೆ: ದಿಲೀಪ್ ಬಿಲ್ಡ್‌ಕಾನ್ ಲಿಮಿಟೆಡ್ ಇವರಿಗೆ ದಿನಾಂಕ:29.02.2018 ರಂದು ಸ್ವೀಕೃತಿ ಪತ್ರ (LOA) ನೀಡಿರುತ್ತಾರೆ. ಸದರಿ ಕಾಮಗಾರಿಗೆ ದಿನಾಂಕ:10.12.2019 ರಂದು ಪ್ರಾರಂಭಗೊಂಡು, 30 ತಿಂಗಳುಗಳಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಬೇಕಾಗಿರುತ್ತದೆ. ಪ್ರಸ್ತುತ ಶೇ.80.30 |
| ಇ. | ಇದನ್ನು ಎಷ್ಟು ಪಥದ ರಸ್ತೆಯನ್ನಾಗಿ ಮಾಡಲಾಗುತ್ತಿದೆ; (ವಿವರ ನೀಡುವುದು) | |
| ಈ. | ಈ ರಸ್ತೆ ಕಾಮಗಾರಿಯು ಪೂರ್ಣಗೊಳ್ಳುವುದು ಯಾವಾಗ? (ವಿವರ ನಿಡುವುದು) | |

| | | |
|---|---|---|
| | | ಭೌತಿಕವಾಗಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ ಹಾಗೂ ದಿನಾಂಕ:07.09.2022 ವರೆಗೆ ವಿಸ್ತರಣೆಗೆ ಅನುಮೋದನೆ ದೊರೆತಿರುತ್ತದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ. |

ಕಡತ ಸಂಖ್ಯೆ: ಲೋಇ 346 ಸಿಎನ್‌ಹೆಚ್ 2021 (ಇ)

(ಸಿ.ಸಿ.ಪಾಟೀಲ)
ಲೋಕೋಪಯೋಗಿ ಸಚಿವರು